98	ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಮಂಡಿಕಲ್ಲು, ಚಿಕ್ಕಬಳ್ಳಾಪುರ ತಾಲ್ಲೂಕು
99	ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಚಾಮರಾಜನಗರ
100	ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಮಾಸ್ತಿ ಕಟ್ಟೆ ನಗರ ಹೋಬಳಿ, ಹೊಸನಗರ ತಾಲ್ಲೂಕು

ಪರಿಶಿಷ್ಟ ಪಂಗಡ ಅರಣ್ಯ ವಾಸಿಗಳಿಗೆ ಹಕ್ಕು ಪತ್ರ ನೀಡುವುದು

235(594); ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು)

ಅ) ಅರಣ್ಯ ಹಕ್ಕು ಕಾಯ್ದೆಯಡಿ ಅರಣ್ಯ ಅಂಚಿನಲ್ಲಿ ಮತ್ತು ಅರಣ್ಯ ಅಂಚಿನಲ್ಲಿ ಮತ್ತು ಅರಣ್ಯದಲ್ಲಿ ವಾಸವಿರುವ ಪರಿಶಿಷ್ಟ ಮಂಗಡ ಮತ್ತು ಇತರೆ ಅರಣ್ಯ ವಾಸಿಗಳಿಗೆ ಹಕ್ಕು ಪತ್ರ ನೀಡಲು ಸರ್ಕಾ ಏನೂ ಕ್ರಮ ಕೈಗೊಂಡಿದೆ?

ಆ) ಕಳೆದ ಮೂರು ವರ್ಷಗಳಲ್ಲಿ ಈ ಬಗ್ಗೆ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು, ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ವೀಕರಿಸಲಾದ ಅರ್ಜಿ ಮತ್ತು ವಿತರಿಸಲಾದ ಹಕ್ಕು ಪತ್ರಗಳ ಸಂಖ್ಯೆ ಎಷ್ಟು? (ಸಂಪೂರ್ಣ ವಿವರ ನೀಡುವುದು)

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಅರಣ್ಯ ಹಕ್ಕು ಕಾಯ್ದೆಯ್ನು 2006 ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದು, ಇದಕ್ಕೆ 2008 ರಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಸದರಿ ನಿಯಮಗಳಿಗೆ ದಿನಾಂಕ: 06/09/2012 ರಂದು ಕೇಂದ್ರ ಸರ್ಕಾರವು ತಿದ್ದುಪಡಿ ಮಾಡಿ ಅಧಿಸೂಚನೆಯನ್ನು ಹೊರಡಿಸಿದೆ. ಅದರನ್ವಯ ರಾಜ್ಯದ 13 ಜಿಲ್ಲೆಗಳಲ್ಲಿ 4882 ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಅರಣ್ಯವಾಸಿಗಳಿಂದ

ಅರ್ಜಿಗಳನ್ನು ಆಹ್ವಾನಿಸಿ ಅವುಗಳ ಪರಿಶೀಲನೆ ನಡೆಸಿ, ಅರ್ಹರಿಗೆ ಹಕ್ಕು ಪತ್ರ ನೀಡಲು ಕ್ರಮಕೈಗೊಳ್ಳಲಾಗಿದೆ. ಈವರೆಗೆ ಅರಣ್ಯ ಹಕ್ಕು ಸಮಿತಿಗಳಿಗೆ ಬಂದಿರುವ ಅರ್ಜಿಗಳ ವಿಲೇವಾರಿ ವಿವರ ಕೆಳಕಂಡಂತಿದೆ.

ಕ್ರ ಸಂ	ಕ್ಲೇಮುದಾರರ ವಿವರ	ಸ್ವೀಕರಿಸಿದ ಅರ್ಜಿಗಳ ಸಂಖ್ಯೆ	ವಿತರಿಸಿದ ಹಕ್ಕು ಪತ್ರಗಳ ಸಂಖ್ಯೆ	ತಿರಸ್ಕೃತ ಗೊಂಡ ಅರ್ಜಿಗಳ ಸಂಖ್ಯೆ	ಇತ್ಯರ್ಥಕ್ಕಾಗಿ ಬಾಕಿಇರುವ ಅರ್ಜಿಗಳ ಸಂಖ್ಯೆ
1	ಪರಿಶಿಷ್ಟ ಪಂಗಡ	30516	6444	15883	8189
2	ಇತರೆ ಪಾರಂಪರಿಕ ಅರಣ್ಯ ವಾಸಿಗಳು	148476	155	140982	7339
3	ಸಮುದಾಯ	2922	94	2239	589
	ಒಟ್ಟು	**181914**	**6693**	**159104**	**16117**

ಆ) ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ವೀಕರಿಸಲಾದ ಹಾಗೂ ವಿಲೇವಾರಿ ಮಾಡಲಾದ ಅರ್ಜಿಗಳ ವಿವರ ಈ ಕೆಳಗಿನಂತಿದೆ.

ಕ್ರ ಸಂ	ವರ್ಷ	ಸ್ವೀಕರಿಸಿದ ಅರ್ಜಿಗಳು	ಹಕ್ಕುಪತ್ರ ನೀಡಲಾದ ಅರ್ಜಿಗಳು	ತಿರಸ್ಕೃತ ಅರ್ಜಿಗಳು
1	2011–12	–	–	–
2	2012–13	6	5	1
3	2013–14	3	–	–